ಬೆಲ್ ಬಾರಿಸಿದಾಗ ಎಚ್ಚರವಾಯಿತು. ಎದ್ದು ಹೊರಗೆ ಬಂದು ಬಾಗಿಲು ತೆರೆದಳು.

ವಿಶಾಲ್ ನಿಂತಿದ್ದ!

***

ಹೇಮಾಗೆ ವಿಶಾಲ್‌ನ ಪರಿಚಯವಾಗಿದ್ದು ಕೂಡ ಆಕಸ್ಮಿಕವಾಗಿ. ತನ್ನದೇ ದೂರದ ಸಂಬಂಧಿ ಯಾವುದೋ ದೊಡ್ಡ ಕಂಪನಿಯೊಂದನ್ನು ಆರಂಭಿಸುತ್ತಿದ್ದಾನೆಂದು ಯಾರೋ ಕಲ್ಯಾಣಮಂಟಪದಲ್ಲಿ ಹೇಳಿದ್ದೇ ಅವನು ನಮ್ಮವರನ್ನೇ ಹುಡುಕುತ್ತಿದ್ದಾನೆನ್ನುವುದು ಕಿವಿಗೆ ಬಿದ್ದಾಗ – ಅವನು ಯಾರು? ಎಲ್ಲಿಯವನು? ಸಂಬಂಧಿ ಎಂದರೆ ಯಾವ ರೀತಿಯಲ್ಲಿ? ಓದು ಮುಗಿಸಿ ಕೆರಿಯರ್ ಬಗೆಗಿನ ಕನಸು ಕಣ್ಣುಗಳಲ್ಲಿ ಚೆಲುವನೆ, ರಸಿಕನೆ, ಯುವಕನೆ, ಮದುವೆಯಾದವನೆ? ಇಂತೆಲ್ಲಾ ಪ್ರಶ್ನೆಗಳನ್ನು ಬದಿಗಿರಿಸಿ ಕೆಲಸ ಗಿಟ್ಟಿಸಿಕೊಳ್ಳುವ ತವಕವಿತ್ತು.

ಮದುವೆ ಮನೆಯಲ್ಲಿ ಸೂಟು ಧರಿಸಿ ಮದುಮಗನಿಗಿಂತಲೂ ಆಕರ್ಷಕವಾಗಿ ಕಾಣಿಸುತ್ತಿದ್ದ ಎಳೆಯ ಯುವಕನನ್ನು ತೋರಿಸಿದ ಪೂರ್ಣಿಮತ್ತೆ ವಿಶಾಲ್‌ನನ್ನು ತೋರಿಸಿ ಅವನು ಆರಂಭಿಸಬೇಕೆಂದಿರುವ ಕಂಪನಿಯ ಬಗ್ಗೆ ತಿಳಿಸಿದ್ದರು. ಅಂತೂ ಒಂದು ದಿನ ಸಂಜೆ ಅವನ ಫೋನ್ ಬಂತು. ಸಹೋದಯ ಮಲ್ಟಿ ಪರ್ಪಸ್ ಹಾಲ್‌ನಲ್ಲಿ ಮೀಟಿಂಗ್ ಇದೆ, ಖಂಡಿತವಾಗಿಯೂ ಬರಬೇಕೆಂದು ಆಹ್ವಾನಿಸಿದ.

ಕೆಲಸದ ಬೇಟೆ ಆರಂಭವಾಗಿದೆಯಷ್ಟೇ. ಲವಲವಿಕೆಯಿಂದ ಪೂರ್ಣಿಮತ್ತೆಗೂ ತಿಳಿಸದೆ ಮೀಟಿಂಗ್‌ಗೆ ಹೋಗಿದ್ದಳು. ಖುದ್ದಾಗಿ ತಾನೇ ಬಂದು ಅವಳನ್ನು ಸ್ವಾಗತಿಸಿ ವಿಷಯ ಸಂಗ್ರಹಿಸಿದ ವಿಶಾಲ್. ಅದು ಮೀಟಿಂಗ್ ಆಗಿರದೆ ಯಾವುದೋ ಹೊಸ ಪ್ರಾಡಕ್ಟ್‌ಗಳನ್ನು ಪರಿಚಯಿಸುವ ಕಾರ್ಯಕ್ರಮವಾಗಿದ್ದು ತುಂಬಾ ಮಂದಿ ಅದರಲ್ಲಿ ಪಾಲ್ಗೊಂಡಿದ್ದರು. ಬಹಳ ಅದ್ದೂರಿಯಾಗಿ ಕಾರ್ಯಕ್ರಮ ನಡೆಯಿತು. ಹೆಲ್ತ್ ಕೇರ್ ಪ್ರಾಡೆಕ್ಟ್‌ಗಳ ಸಮಾವೇಶವೆನ್ನುವುದು ಅವಳಿಗೆ ತಿಳಿಯಲಿಲ್ಲವಾದರೂ ಕ್ರಮೇಣ ಅಲ್ಲಿಯ ಆರ್ಭಟ, ವೈಭೋಗ ಮೋಡಿ ಮಾಡುವಂತೆ ಇರುವುದನ್ನು ಕಂಡು ಊಹಿಸಿದಳು. ಎಲ್ಲೋ ಮಾರ್ಕೆಟಿಂಗ್ ವಿಷಯದಲ್ಲಿ ಅವಳು ಓದಿದ್ದನ್ನು ನೆನಪಿಸಿಕೊಂಡಳು. ಸದ್ಯ ವಿಶ್ವ ಮಾರುಕಟ್ಟೆ ಇಂತಹ ನೆಟ್‌ವರ್ಕಿಂಗ್ ಮಾರ್ಕೆಟ್‌ನ ಕಡೆಗೆ ವಾಲುತ್ತದೆ ಎನ್ನುವ ವಿಷಯವನ್ನು ಹಲವಾರು ಕೃತಿಗಳಲ್ಲಿಯೂ ಓದಿ ತಿಳಿದುಕೊಂಡಿರುವುದರಿಂದ ಆ ಸಮಾವೇಶವನ್ನು ಸುಲಭದಲ್ಲಿ ಅರ್ಥೈಸಿಕೊಂಡಳು.

ಯಾವುದೋ ಕಥೆಯ ಬಿಲ್ಡ್ ಅಪ್. ಕಂಪನಿಯ ಸಿಇಒನ ಉತ್ತೇಜನಕಾರಿ ಮಾತುಗಳು, ಪ್ರಾಡೆಕ್ಟ್‌ಗಳ ಗುಣಮಟ್ಟ, ಅವುಗಳ ಪ್ರಯೋಜನ, ವಿಶ್ವ ಮಟ್ಟದಲ್ಲಿ ಅವುಗಳಿಗಿರುವ ಬೇಡಿಕೆ, ಹೈಜೀನಿಕ್ ಆಗಿ ಅವು ಹೇಗೆ ಉತ್ಪಾದನೆಯಾಗುತ್ತಿವೆಯೆನ್ನುವ ಮಾಹಿತಿಗಳನ್ನು ತಲಸ್ಪರ್ಶಿಯಾಗಿ ತಿಳಿಸಿ ಭಾಗವಹಿಸಿದ ಎಲ್ಲರೂ ಅದರ ಮಧ್ಯವರ್ತಿಗಳಾಗುವಂತೆ ಇತ್ತು ಮೊದಲ ಅರ್ಧಭಾಗ. ಆ ಬಳಿಕ ಭೂರಿಭೋಜನದ ವ್ಯವಸ್ಥೆ. ಕಾರ್ಯಕ್ರಮ ಮುಗಿದು ಅವಳು ಹೊರ ಬರಬೇಕೆನ್ನುವಷ್ಟರಲ್ಲಿ ವಿಶಾಲ್ ಎದುರಾದ.

ಕಾರ್ಯಕ್ರಮದ ಬಗ್ಗೆ ವಿಚಾರಿಸಿದ. ಅವಳು ಸ್ಪಷ್ಟವಾಗಿ ಎಲ್ಲವನ್ನೂ ಹೇಳಿದ ಮೇಲೆ ಪೂರ್ಣಿಮತ್ತೆಯ ವಿಷಯವನ್ನು ಪ್ರಸ್ತಾಪಿಸಿದಳು. ಅವನು ಕ್ಷಣ ಹೊತ್ತು ಆಲೋಚನೆಗೊಳಗಾದವ ಅವಳನ್ನು ಅಳೆಯುವಂತೆ ನೋಡಿದ. ಅವಳಿಗೆ ಮುಜುಗರವಾದರೂ ತೋರಿಸಿಕೊಳ್ಳದೆ ಪಕ್ಕಕ್ಕೆ ಸರಿದು ನಿಂತಾಗ ಸದರ ತೋರಿಸಿ ಅವಳನ್ನು ವೇದಿಕೆಯತ್ತ ಕರೆದೊಯ್ದ.

ಅಲ್ಲಿಯೇ ಇದ್ದ ಕಂಪನಿಯ ಹೆಚ್‌ಆರ್ ಸುಗುಣಶೀಲರಿಗೆ ಆಕೆಯನ್ನು ಪರಿಚಯಿಸಿ ಅವಳ ಬಯೋಡಾಟವನ್ನು ಪಡೆದುಕೊಳ್ಳುವಂತೆ ಹೇಳಿದ. ವಿಶಾಲ್ ಹೇಮಾಳನ್ನು ಕರೆದು ಮರುದಿನದಿಂದಲೇ ಆಫೀಸಿಗೆ ಬರುವಂತೆ ಹೇಳಿದ. ಮದುವೆ ಮನೆಯಿಂದ ಆಫೀಸಿಗೆ ಸೇರಿದ ನೆನಪುಗಳು ಚಿತ್ತದಲ್ಲಿ ರೀಲಿನಂತೆ ನಡೆದುಹೋದವು.

ವಿಶಾಲ್‌ನ ಬಗ್ಗೆ ಗೌರವವಿತ್ತೇ ಹೊರತು ಬೇರೆ ಯಾವ ಭಾವನೆಯೂ ಅವಳಿಗಿರಲಿಲ್ಲ. ಮೊದಲೇ ಅವಳ ಮನಸ್ಸು ಆತನ ಅಂತಸ್ತನ್ನು ಅಳೆದು ತನಗೆ ಸರಿಹೊಂದದೆಂದು ತೀರ್ಮಾನಿಸಿ ಬಾಸ್ ಸಬಾರ್ಡಿನೇಟ್ ಸಂಬಂಧವನ್ನು ಬೆಳೆಸಿಕೊಂಡಿದ್ದಳು. ಕಾಲ ಸರಿಯುತ್ತಲೇ ಇತ್ತು. ಕೆಲಸ ಕಾರ್ಯಗಳೆಲ್ಲಾ ಸಾಂಗವಾಗಿ ನಡೆಯುತ್ತಿದ್ದವು.

ಇದ್ದಕ್ಕಿದಂತೆ ಕಂಪನಿಯ ಉತ್ಪಾದನೆಯ ಮೇಲೆ ದೊಡ್ಡ ಆರೋಪವೊಂದು ಬಂದು ನಿಂತಿತು. ಕಂಪನಿ ಆರೋಗ್ಯಕ್ಕೆ ಪೂರಕವಾದ ಪ್ರಾಡೆಕ್ಟ್‌ಗಳನ್ನು ಉತ್ಪಾದಿಸಿ, ಚೈನ್ ಸಿಸ್ಟಮ್‌ನಂತಹ ವ್ಯವಸ್ಥೆಯಲ್ಲಿ ಸಮಾಜದ ಸ್ವಾಸ್ಥ್ಯವನ್ನು ಕದಡುತ್ತಿದೆ. ಮಧ್ಯವರ್ತಿಗಳಾದವರು ಜನರಿಗೆ ಮೋಸದಿಂದ ಉತ್ಪಾದನೆಗಳನ್ನು ಮಾರಾಟ ಮಾಡುತ್ತಿದ್ದಾರೆ. ಇದೊಂದು ದಂಧೆಯೇ ಹೊರತು ಅಲ್ಲಿಯ ಪ್ರಾಡೆಕ್ಟ್‌ಗಳು ಹೈಜೀನಿಕ್ ಹೆಸರಿನಲ್ಲಿ ಜನರ ಆರೋಗ್ಯಕ್ಕೆ ಅಡ್ಡಪರಿಣಾಮವನ್ನು ಬೀರುತ್ತಿವೆ ಎನ್ನುವ ಆರೋಪವೆದ್ದಿತು. ಮಾತ್ರವಲ್ಲ, ಯಾವನೋ ಒಬ್ಬ ಗ್ರಾಹಕ ನಿರಂತರವಾಗಿ ಆ ಪ್ರಾಡೆಕ್ಟ್‌ಗಳನ್ನು ಉಪಯೋಗಿಸಿ ಕಿಡ್ನಿ ಕಳೆದುಕೊಂಡಿರುವುದಾಗಿ ಆರೋಪ ಹೊರಿಸಿ ಕೋರ್ಟ್‌ನಲ್ಲಿ ವ್ಯಾಜ್ಯ ಹೂಡಿದ್ದ. ತತ್‌ಕ್ಷಣವೇ ಕಂಪನಿ ವ್ಯವಹಾರವನ್ನು ನಿಲ್ಲಿಸಬೇಕೆಂದು ಕೋರ್ಟ್ ಆದೇಶ ನೀಡಿತು. ವ್ಯವಹಾರ ಸ್ಥಗಿತಗೊಂಡು ಕಂಪನಿ ಮುಚ್ಚುವ ಪರಿಸ್ಥಿತಿ ಎದುರಾಯಿತು.

ಇದಕ್ಕೆ ಸಹಾಯಕ್ಕೆಂಬಂತೆ ಹೈದರಾಬಾದ್ ಪ್ರಾಂತ್ಯದ ಸಿಇಒ ಮನಮೋದ ಕೋರ್ಟ್‌ನ ವ್ಯಾಜ್ಯವನ್ನು ಎದುರಿಸಲು ಸಜ್ಜಾದ. ಕಂಪನಿಯ ಪ್ರಾಡೆಕ್ಟ್‌ಗಳ ಗುಣಮಟ್ಟ, ಅವುಗಳಿಗಿರುವ ಸರ್ಟಿಫಿಕೇಟ್, ಅವುಗಳ ಸಂಪೂರ್ಣ ಮಾಹಿತಿ ಮತ್ತು ಕೆಲವೊಂದು ಡಾಕ್ಟರ್‌ಗಳು ಶಿಫಾರಸು ಮಾಡಿರುವ ದಾಖಲೆಗಳನ್ನು ತೆಗೆದುಕೊಂಡು ಕೋರ್ಟ್‌ಗೆ ನೀಡಿದ. ಸುಮಾರು ಆರೇಳು ತಿಂಗಳುಗಳ ಕಾಲ ವ್ಯಾಜ್ಯ ನಡೆದು ಕೊನೆಗೂ ಕಂಪನಿಯ ಪರವಾಗಿ ಕೇಸ್ ಗೆದ್ದಿತು. ಆದರೆ, ಆ ಗೆಲುವು ಇನ್ನೊಂದು ಎಚ್ಚರಿಕೆಯನ್ನು ನೀಡಿತು. ಗ್ರಾಹಕರನ್ನು ತಲುಪಬೇಕಾದಾಗ ಇವು ಔಷಧಿಗಳಲ್ಲ, ಕೇವಲ ನ್ಯೂಟ್ರಿಷನ್ ಆಹಾರಗಳೆಂದು ಒಪ್ಪಿಸಬೇಕಾಗಿತ್ತು. ಇದಕ್ಕೆ ಮಧ್ಯವರ್ತಿಗಳೆಲ್ಲರೂ ಬದ್ಧರಾಗಿದ್ದರು. ಅವರ ಸೇಲ್ಸ್ ವಾಲ್ಯೂಮ್ ಮೇಲೆ ಅವರ ಸ್ಟಾರ್‌ಗಿರಿಯನ್ನು ನಿರ್ಧರಿಸಲಾಗುತಿತ್ತು. ಅವರ ಆದಾಯವನ್ನೂ ನಿರ್ಧರಿಸಿ ವಿದೇಶಿ ಪ್ರವಾಸಕ್ಕೆಂದು ಬ್ಯಾಂಕಾಕ್, ಹಾಂಕಾಂಗ್, ದುಬೈ, ಮಲೇಷ್ಯಾ, ಸ್ವಿಟ್ಜರ್ಲೆಂಡ್ ಮುಂತಾದೆಡೆ ಅವರನ್ನು ಕಂಪನಿ ವೆಚ್ಚದಲ್ಲಿ ಕಳುಹಿಸಲಾಗುತಿತ್ತು. ಯುವಕರ ಉತ್ಸಾಹವೇ ಕಂಪನಿಯ ಉನ್ನತಿಯಾಗಿತ್ತು.

ಕೋರ್ಟ್ ವ್ಯಾಜ್ಯ ಗೆದ್ದ ಮೇಲೆ ಇದ್ದಕ್ಕಿದಂತೆ ವಿಶಾಲ್ ಹೈದರಾಬಾದ್ ಪ್ರಾಂತ್ಯದ ಸಿಇಒ ಮನಮೋದನನ್ನು ಕರೆಸಿದ. ಅದೇ ದಿನ ಇಂಟರ್‌ನ್ಯಾಷನಲ್ ಹೋಟೆಲ್ ಮಥುರಾದಲ್ಲಿ ದೊಡ್ಡ ಪಾರ್ಟಿಯೊಂದನ್ನು ಏರ್ಪಡಿಸಿದ. ಅಲ್ಲಿಯೇ ಮನಮೋದನ ಕಣ್ಣಿಗೆ ಬಿದ್ದವಳು ಹೇಮಾ.

***

ಅಪರಾತ್ರಿಯಲ್ಲಿ ಅಪರಿಚಿತನಂತೆ ಮನೆ ಬಾಗಿಲಿಗೆ ಬಂದ ವಿಶಾಲ್‌ನನ್ನು ಯಾವುದೇ ಅಳುಕಿಲ್ಲದೆ ಒಳಗೆ ಕರೆದ ಹೇಮಾ ಅಚ್ಚರಿಯೆನಿಸಿದರೂ ತೋರ್ಪಡಿಸಿಕೊಳ್ಳದೆ ಕುಳಿತುಕೊಳ್ಳುವಂತೆ ಸೂಚಿಸಿದಳು.

ವಿಶಾಲ್ ಕುಳಿತುಕೊಂಡರೂ ಅವನ ಮುಖ ಗಂಭೀರವಾಗಿತ್ತು. ಅದೇನೋ ಅವಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಮಾತು ತೆಗೆದ. ಹೇಮಾ ಅಧೀರಳಾದಳು.

ಮನಮೋದನೇನೂ ಹೇಮಾಳನ್ನು ಆಕರ್ಷಿಸಿರಲಿಲ್ಲ. ಅವನ ಬಗ್ಗೆ ಭಾವನೆಗಳೇ ಇಲ್ಲವೆಂದ ಮೇಲೆ ವಿಶಾಲ್ ಒತ್ತಾಯಿಸುವುದರಲ್ಲಿ ಯಾವುದೇ ಸಕಾರಣಗಳಿರಲಿಲ್ಲ. ತಾನೂ ಅರುಣ ಒಟ್ಟಿಗೆ ಒಂದೇ ಮನೆಯಲ್ಲಿರುವುದಕ್ಕೆ ಆತನ ವಿರೋಧ. ಕಟ್ಟಾ ಸಂಪ್ರದಾಯಿವಾದಿಗಳಾದವರು ಈ ರೀತಿ 'ಲಿವಿಂಗ್ ಟು ಗೆದರ್'ನಲ್ಲಿರುವುದಿಲ್ಲ ಅನ್ನುವುದು ಅವನ ವಾದ. ಅರುಣನ ಜೊತೆಗೆ ಒಂದೇ ಮನೆಯಲ್ಲಿದ್ದರೂ ಇಷ್ಟು ದಿನವೂ ಯಾವುದೇ ಗಡಿಗಳನ್ನು ಮೀರಿದ್ದಿಲ್ಲ. ಅವಳನ್ನು ದೊಡ್ಡವರನ್ನಾಗಿ ಮಾಡಿ ಓದುಬರಹ ಕಲಿಯಲು ಸಹಾಯ ಮಾಡಿದ್ದೇ ಅರುಣನ ಅಮ್ಮ ಸರಸ್ವತಿಯವರು. ಹಾಗಾಗಿಯೇ ಅರುಣನೆಂದರೆ ಸಲುಗೆ, ಮಮತೆ ಎಲ್ಲವೂ.

ವಿಶಾಲ್‌ಗೆ ಇದನ್ನು ಒಪ್ಪಿಸುವ ಜರೂರತ್ ಕೂಡ ಇರಲಿಲ್ಲ ಹೇಮಾಳಿಗೆ. ವಿಶಾಲ್ ಕೇವಲ ತನಗೆ ಬಾಸ್, ತಾನು ಅವಳ ಕಂಪನಿಯ ಒಬ್ಬ ಸಾಮಾನ್ಯ ಸಿಬ್ಬಂದಿ ಅಷ್ಟೇ.

ಹಿಂದೊಮ್ಮೆ ಕ್ಷುಲ್ಲಕ ವಿಷಯಕ್ಕೆ ಜಗಳ ತೆಗೆದು ಹೇಮಾಳನ್ನು ಠಾಣೆಯ ಮೆಟ್ಟಿಲೇರಿಸುತ್ತೇನೆಂದು ಬೆದರಿಸಿದ. ಅದೂ ಯಾರದೋ ಹಣ ಇನ್ಯಾರಿಗೋ ಕಳಿಸಿ, ಅದನ್ನು ಅವಳೇ ತೆಗೆದುಕೊಂಡಿರುವಳೆನ್ನುವ ಆರೋಪದ ಮೇಲೆ. ಈ ವಿಷಯ ಪೂರ್ಣಿಮತ್ತೆಯವರೆಗೂ ಹೋದಾಗ